ಒಪ್ಪಿಕೊಳ್ಳುತ್ತೇನೆ. ಆದರೂ ಸಹ ಇರತಕ್ಕ ಸ್ಥಿತಿಯಲ್ಲಿಯೇ ಜನರಿಗೆ ಯಾವ ಪ್ರಮಾಣದಲ್ಲಿ ತೊಂದರೆಯಾಗಬೇಕಾಗಿತ್ತೋ ಅದು ಕಡಿಮೆಯಾಗಿದೆ ಎನ್ನತಕ್ಕ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಿನರ್ವಾಮಿಲ್ಸ್‌ನ ಆವರಣದ ಪಕ್ಕದಲ್ಲಿ ರಸ್ತೆಯನ್ನು ವಿಸ್ತರಣೆ ಮಾಡುವ ಕೆಲಸ ಪ್ರಾರಂಭವಾಗಿತ್ತು, ಈಗ ಆ ಕೆಲಸದ ಪ್ರಗತಿ ಎಲ್ಲಿಯವರೆಗೆ ಆಗಿದೆ.

ಶ್ರೀ ಕೆ.ಎಸ್. ಬೀಳಗಿ : ಅದರ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡು ಹೇಳುತ್ತೇನೆ.

ಶ್ರೀ ಬಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್‌ಕುಮಾರ್‌ರವರೇನು ಪ್ರಶ್ನೆಯನ್ನು ಕೇಳಿದ್ದರು, ಸಿಟಿ ರೈಲು ನಿರ್ಮಾಣದಿಂದ ವಾಟಾಳ್‌ನಾಗರಾಜ್ ಮಾರ್ಗಕ್ಕೆ ಹೋಗುವಾಗ ಸುಜಾತ ಚಿತ್ರಮಂದಿರವೆನ್ನತಕ್ಕದ್ದು ಇದೆ, ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದೆ. ಅಲ್ಲಿ ನೂರಾರು ರಾಮಚಂದ್ರಪುರಕ್ಕೆ ಬಲಗಡೆ ತಿರುಗಬೇಕಾದರೆ, ರಾಜಾಜಿನಗರಕ್ಕೆ ಹೋಗಿ ರಾಮಕುಮಾರ್ ಮಿಲ್ಸ್‌ನ್ನು ದಾಟಿ ಮತ್ತೆ ಬರಬೇಕು, ಅಲ್ಲಿ ಬಹಳ ಸಂಚಾರಿ ಒತ್ತಡವಿರುವುದರಿಂದ ಸುರಂಗ ಮಾರ್ಗ ಮಾಡಿ ರಾಮಚಂದ್ರಪುರಕ್ಕೆ ಬಲಕ್ಕೆ ತಿರುವು ಕೊಡಬೇಕೆಂದು ಬಹಳ ದಿವಸಗಳಿಂದ ಬೇಡಿಕೆ ಇದೆ, ಅದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಬೇಕು. ಬಸವೇಶ್ವರ ನಗರ, ಮಾಗಡಿ ರಸ್ತೆ, ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಹೋಗಬೇಕಾಗಿರುವ ಎಲ್ಲಾ ವಾಹನಗಳೂ ಸಹ ಅಲ್ಲಿಯೇ ಹೋಗಬೇಕಾಗಿದೆ. ಆದ್ದರಿಂದ ದಯವಿಟ್ಟು ಸರ್ಕಾರ ಇದರ ಬಗ್ಗೆ ತೀವ್ರವಾದ ಪರಿಶೀಲನೆ ಮಾಡಿ ಕ್ರಮತೆಗೆದುಕೊಳ್ಳಬೇಕು.

ಅಧ್ಯಕ್ಷರು : ಯೋಗ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ, ಪರಿಶೀಲನೆ ಮಾಡಿ.

ಕರ್ನಾಟಕ ಲೋಕಾಯುಕ್ತ ಸಾಬೀತು ಪಡಿಸಲಾಗಿರುವ ಪ್ರಕರಣಗಳು

92-ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಲೋಕಾಯುಕ್ತವು ಇದುವರೆವಿಗೆ ಎಷ್ಟು ಪ್ರಕರಣಗಳಲ್ಲಿ ಭ್ರಷ್ಟಚಾರ ಮತ್ತು ಕ್ರಿಮಿನಲ್ ಸ್ವರೂಪದ ಆರೋಪಗಳನ್ನು ಸಾಬೀತು ಪಡಿಸಿರುತ್ತದೆ.

ಆ) ಸಾಬೀತು ಪಡಿಸಿರುವ ಪ್ರಕರಣಗಳಲ್ಲಿ ಸರ್ಕಾರ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿರುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 43

ಆ) 5 ಪ್ರಕರಣಗಳಲ್ಲಿ ಸರ್ಕಾರಿ ನೌಕರರನ್ನು ಸೇವೆಯಿಂದ ವಜಾ ಮಾಡಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತದವರು ಇದುವರೆಗೆ ಸುಮಾರು 43ಪ್ರಕರಣಗಳಲ್ಲಿ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಸ್ವರೂಪದ ಆರೋಪಗಳನ್ನು ಸಾಬೀತುಪಡಿಸಿದ್ದಾರೆ. ಅದರಲ್ಲಿ ಕೇವಲ 5 ಜನ ಸರ್ಕಾರಿ ನೌಕರರ ಮೇಲೆ ಕ್ರಮತೆಗೆದುಕೊಂಡಿದ್ದಾರೆ. ಉಳಿದ 35 ಜನರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಅವರು ಏಕೆ ಇನ್ನೂ ಕೆಲಸದಲ್ಲಿ ಮುಂದುವರೆದುಕೊಂಡು ಹೋಗುತ್ತಿದ್ದಾರೆ? 38 ಜನರಲ್ಲಿ ಎಷ್ಟು ಜನರಿಗೆ ಬಡ್ತಿ ಸಿಕ್ಕಿದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಹಲವಾರು ಪ್ರಕರಣಗಳಲ್ಲಿ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ, ಒಂದೊಂದನ್ನು ಬೇಕಾದರೆ ಬಿಡಿಸಿ ಹೇಳಬಹುದು. ಇದಕ್ಕೆ ಏನೂ ತೊಂದರೆ ಇಲ್ಲ. ಹಲವಾರು ಪ್ರಕರಣಗಳಲ್ಲಿ ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದ ಮುಂದೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಮುಂದೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಇದರ ಪರಿಣಾಮ ಇವತ್ತು ನಾವು ಅವರನ್ನು ಸೇವೆಯಲ್ಲಿ ಕಂಟಿನ್ಯೂ ಮಾಡಬೇಕಾದಂತಹ ಸನ್ನಿವೇಶ ಬಂದಿದೆ. ಒಂದು ಪ್ರತಿಷ್ಠಿತ ಪತ್ರಿಕೆಯಲ್ಲಿ ಸುಮಾರು 18 ಜನರ ಹೆಸರು ಸರ್ಕಾರ ಕನ್‌ವಿಕ್ಟ್ ಆಗಿರುವವರನ್ನು ಕೂಡ ಹಾಗೆ ಮುಂದುವರಿಸುತ್ತಿದೆ ಎಂದು ಬಂದ ಮೇಲೆ ನಾನು ಅದರ ವಿವರವನ್ನು ತರಿಸಿದ್ದೇನೆ. ಒಂದೊಂದು ಕೇಸನ್ನು ಬೇಕಾದರೆ ಸಂಬಂಧಿಸಿದವರಿಗೆ ಬಿಡಿಸಿ ಹೇಳುತ್ತೇನೆ. 38 ಜನಕ್ಕೆ ನಾನು ಕಳುಹಿಸಿ ಕೊಡುವುದಕ್ಕೆ ಸಿದ್ಧನಿದ್ದೇನೆ. ಇದರಲ್ಲಿ ನಾವು ಯಾರನ್ನೂ ಸ್ಪೇರ್ ಮಾಡಬೇಕೆನ್ನುವ ಪ್ರಶ್ನೆ ಇಲ್ಲ. ಏಕೆಂದರೆ ಅನೇಕ ಪ್ರಕರಣಗಳಲ್ಲಿ ಕೋರ್ಟ್ ಮಧ್ಯ ಪ್ರವೇಶ ಮಾಡಿರುವುದರಿಂದ, ಕೋರ್ಟಿನಲ್ಲಿ ತಡೆ ಆರ್ಡರ್ ಕೊಟ್ಟಿರುವುದರಿಂದ, ನಾವು ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದು ಕಷ್ಟ. ಈ ಸನ್ನಿವೇಶ ಇದೆ. ಬೇಕಾಗಿದ್ದರೆ ನಾನು ಡೀಟೇಲಾಗಿ ಓದುತ್ತೇನೆ. ಯಾರದೂ ಮುಲಾಜಿಲ್ಲ ನನಗೆ.

ಶ್ರೀ ಎ.ಟಿ. ರಾಮಸ್ವಾಮಿ : ಸಭಾಧ್ಯಕ್ಷರೆ 38 ಜನರ ಮೇಲೆ ಕ್ರಮವನ್ನು ಜರುಗಿಸಿಲ್ಲ. ಆ ಪೈಕಿ ಎಷ್ಟು ಜನ ಉನ್ನತ ನ್ಯಾಯಾಲಯದಲ್ಲಿ ಸ್ಟೇ ತಂದಿದ್ದಾರೆ, ಸ್ಟೇ ತರದೆ ಇರುವವರ ಮೇಲೆ ಕ್ರಮವನ್ನು ಜರುಗಿಸಿಲ್ಲ ಅದನ್ನು ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ನನಗೆ ಬಂದ ಮಾಹಿತಿ ಪ್ರಕಾರ ಯಾರು ಯಾವ ಅಧಿಕಾರಿ ತಾಳಕ್ಕೆ ತಕ್ಕಂತೆ ಕುಣಿಯುವುದಿಲ್ಲ. ಅಂತಹ ಅಧಿಕಾರಿಗಳ ಮೇಲೆ ಈ ಲೋಕಾಯುಕ್ತದವರನ್ನು ಉಪಯೋಗಿಸಿಕೊಂಡು, ಕೆಲವು ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆನ್ನುವ ಮಾಹಿತಿ ನನಗೆ ಬಂದಿದೆ. ಸುಮಾರು 10 ವರ್ಷಗಳಲ್ಲಿ 40 ಪ್ರಕರಣ ಮಾಡಿದ್ದಾರೆ ವರ್ಷಕ್ಕೆ ನಾಲ್ಕು ಆಯಿತು.

ಅಧ್ಯಕ್ಷರು : ರಾಮಸ್ವಾಮಿಯವರೇ ಪ್ರಶ್ನೆ ಕೇಳುವ ವಿಧಾನ. ಲೋಕಾಯುಕ್ತದವರು ಸ್ವಯಂ ಪ್ರೇರಿತವಾಗಿ ಎಷ್ಟು ಪ್ರಕರಣಗಳಲ್ಲಿ ಕೇಸ್ ದಾಖಲು ಮಾಡಿದ್ದಾರೆ, ಖಚಿತವಾದ ದೂರಿದ ಆಧಾರದ ಮೇಲೆ ಎಷ್ಟು ಕೇಸ್ ದಾಖಲು ಮಾಡಿದ್ದಾರೆ ಎಂದು ಕೇಳಿದರೆ ಅವರು ಉತ್ತರ ಹೇಳುತ್ತಾರೆ.

ಶ್ರೀ ಎ.ಟಿ. ರಾಮಸ್ವಾಮಿ : 10 ವರ್ಷದಲ್ಲಿ ಎಷ್ಟು ಪ್ರಕರಣಗಳಲ್ಲಿ ಸಾಬೀತು ಮಾಡಿದ್ದಾರೆ, ಅವರು ಕೊಟ್ಟಿರುವ ಪ್ರಕಾರ ವರ್ಷಕ್ಕೆ 4 ಬರುತ್ತವೆ. ಅಧ್ಯಕ್ಷರನ್ನು ಅಪ್ರಾಮಾಣಿಕರನ್ನೂ ಲೋಕಾಯುಕ್ತದಲ್ಲಿ ಇಟ್ಟುಕೊಂಡು ಸಾರ್ವಜನಿಕ ಕ್ಷೇತ್ರದಲ್ಲಿ ಶುದ್ಧ ಮಾಡುವುದಕ್ಕೆ ಆಗುತ್ತದೆಯೇ ದಯಮಾಡಿ ಇದನ್ನು ತಿಳಿಸಬೇಕು. 38 ಜನರ ಪೈಕಿ ಎಷ್ಟು ಜನ ಹೈಕೋರ್ಟಿನಿಂದ ಸ್ಟೇ ತಂದಿದ್ದಾರೆ ಎಂದು ಹೇಳಿ. ಸ್ಟೇ ತರದೆ ಇರುವವರ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ?

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತದ ಅಧ್ಯಕ್ಷರ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ. ಅವರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ನನ್ನ ದೃಷ್ಟಿಯಲ್ಲಿ ಸರಿಯಲ್ಲ. ನಾವು ಒಬ್ಬರನ್ನು ನೇಮಕ ಮಾಡಿದ ಮೇಲೆ, ನೇಮಕ ಮಾಡತಕ್ಕಂತಹ ವಿಧಿ, ವಿಧಾನ ನಿಯಮವನ್ನು ಅನುಸರಿಸಿ ಈ ಸದನವೇ ಪಾಸ್ ಮಾಡಿರತಕ್ಕಂಥ ಕಾನೂನು ಚೌಕಟ್ಟಿನಲ್ಲಿ ನೇಮಕ ಮಾಡಿದ್ದೇವೆ. ಅದರಿಂದ ನಾವು ಅಂತಹ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸರಿಯಲ್ಲ ಎಂದು ನನ್ನ ಭಾವನೆ. ಎರಡನೆಯದು, ನಾವು ಯಾವ ಅಧಿಕಾರಿಯನ್ನು ಕೂಡ ಲೋಕಾಯುಕ್ತದವರಿಗೆ

ಹಿಡಿಯಿರಿ ಎಂದು ಇವತ್ತಿನವರೆಗೂ ಹಸ್ತಕ್ಷೇಪ ಮಾಡುವುದಕ್ಕೆ ಹೋಗಲಿಲ್ಲ. ನಮ್ಮ ಎಂಟು ತಿಂಗಳಲ್ಲಿ ನನಗೆ ಎರಡೇ ಎರಡು ವರದಿ ಬಂದಿದೆ. ಹಿಂದೆ 10 ವರ್ಷಗಳಲ್ಲಿ ಸರ್ಕಾರದವರು ಯಾವುದು ರೆಫರ್ ಮಾಡಿದ್ದಾರೆ. ಅವರಿಗೆ ಇದರಿಂದ ಏನಾಗಿದೆ ಅದು ಅಷ್ಟನ್ನೂ ತರಿಸಿ ಸದನದ ಮುಂದಿಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಲೋಕಾಯುಕ್ತಕ್ಕೆ ಪನಿಷ್‌ಮೆಂಟ್ ಮಾಡುವಂತಹ ಅಧಿಕಾರ ಇಲ್ಲ. ಇನ್‌ವೆಸ್ಟಿಗೇಷನ್ ಮಾತ್ರ ಮಾಡುತ್ತಾರೆ. ಅನೇಕ ವರದಿಗಳು ಬಂದಿವೆ, ಇದುವರೆಗೆ ಸಸ್ಪೆಂಡ್ ಮಾಡಿ ಮತ್ತೆ ರಿವೋಕ್ ಆಗುತ್ತಿದೆ. ಈ ಪ್ರಯತ್ನ ಬರೀ ವ್ಯರ್ಥ. ನಾನು ಅದಕ್ಕೆ ಸಲಹೆ ಕೊಡುವುದು ಎಲ್ಲಿಯವರೆಗೆ ಸರ್ಕಾರಕ್ಕೆ ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಬೇಕೆಂದು ಕಳಕಳಿ ಇರುವುದಿಲ್ಲ, ಅಲ್ಲಿಯವರೆಗೆ ಈ ವ್ಯವಸ್ಥೆಗೆ ಅರ್ಥ ಬರುವುದಿಲ್ಲ. ವೃಥಾ ಬಡವರು ಕೊಡುವ ತೆರಿಗೆ ಪೋಲಾಗುತ್ತಿದೆ. ಆದ್ದರಿಂದ ದಯವಿಟ್ಟು ಲೋಕಾಯುಕ್ತವನ್ನು ರದ್ದು ಮಾಡಿ ಎಂದು ನಾನು ಮುಖ್ಯ ಮಂತ್ರಿಗಳಿಗೆ ಸಲಹೆ ಕೊಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸ್ಪಷ್ಟೀಕರಣ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಲೋಕಾಯುಕ್ತದ ಸಲಹೆಯನ್ನು ನಾವು ಎಂದೂ ಬದಲಾವಣೆ ಮಾಡಿಲ್ಲ. ಎರಡು ಅಧಿಕಾರಿಗಳ ಹೆಸರುಗಳನ್ನು ಅವರು ಏನು ಹೇಳುತ್ತಾರೆ ಅದರ ಬಗ್ಗೆ ನಾನು ಡಿಸಿಷನ್ ತೆಗೆದುಕೊಂಡಿದ್ದೇನೆ ಅದನ್ನು ಸಭೆಯ ಮುಂದಿಡುತ್ತೇನೆ. It is not contrary to the decision of the Lok Ayukta. It is a matter pertaining to C.B.I. and another matter also pertains to C.B.I. That is a different case. ಲೋಕಾಯುಕ್ತದಿಂದ ಬಂದಿರತಕ್ಕಂಥಹ ಯಾವುದೇ ಕೇಸನ್ನು ಈ ಸಚಿವ ಸಂಪುಟದಲ್ಲಿ ಕಳೆದ ಎಂಟು ತಿಂಗಳಲ್ಲಿ ನಾವು ಮಾರ್ಪಾಡು ಮಾಡಲಿಲ್ಲ.

ಚಿತ್ರಾಲಿ ಸಮೀಪ ಏತ ನೀರಾವರಿ ಪ್ರಾರಂಭ

663 - ಶ್ರೀ ಕೆ. ವಿರುಪಾಕ್ಷಪ್ಪ (ಸಿಂಧನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ, ಎಡದಂಡೆ ಕಾಲುವೆಯ 54ನೇ ಉಪ ಕಾಲುವೆಯ 54ನೇ ಕೊನೆಯಲ್ಲಿ ಬರುವ ಚಿತ್ರಾಲಿ ಸಮೀಪ ಏತ ನೀರಾವರಿ ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹೌದು

ಆ) ವಿವರವಾಗಿ ಪರಿಶೀಲಿಸಿದ ನಂತರ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ವಿರೂಪಾಕ್ಷಪ್ಪ : ಮಾನ್ಯ ಸಣ್ಣ ನೀರಾವರಿ ಸಚಿವರು ನಮ್ಮ ಚಿತ್ರಾಲಿ ಏತ ನೀರಾವರಿ ಕಾಮಗಾರಿಯನ್ನು ವಿವರವಾಗಿ ಪರಿಶೀಲಿಸಿದ ನಂತರ ಅಗತ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ ಎಂದು ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಏತ ನೀರಾವರಿ ಬಗ್ಗೆ ಚಿತ್ರಾಲಿ ನದಿ ಹತ್ತಿರ, ರಾಯಚೂರು ಜಿಲ್ಲಾ ಪಂಚಾಯಿತಿಯಿಂದ ಸುಮಾರು 3 ಲಕ್ಷ 27,000 ರೂಪಾಯಿ ವೆಚ್ಚದ ಕಾಮಗಾರಿ ನಡೆಯುತ್ತಿದೆ. ಅದಕ್ಕೆ ಈಗಾಗಲೇ 2 ಲಕ್ಷ 40,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರ ಜೊತೆಯಲ್ಲಿ ಇದನ್ನು ಪರಿಶೀಲಿಸಿ ಮುಂದುವರೆಸಿಕೊಂಡು ಹೋಗುತ್ತೇವೆ.